ತಿ. ನರಸೀಪುರದ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ

ಸಿಸಿ ಸಂಖ್ಯೆ 287/2015

CW-40/PW-2

| | | |
|---|---|---|
| ಹೆಸರು | : | ವಿ.ಎಸ್.ಶಶಿಕುಮಾರ್ |
| ತಂದೆ/ಗಂಡನ ಹೆಸರು | : | ಶ್ರೀಕಂಠ |
| ವಯಸ್ಸು | : | 41 ವರ್ಷ |
| ವೃತ್ತಿ | : | ಪೊಲೀಸ್ ನಿರೀಕ್ಷಕರು |
| ವಾಸ ಸ್ಥಳ | : | ಮೈಸೂರು ದಕ್ಷಿಣ ಪೊಲೀಸ್ ಠಾಣೆ |
| ದಿನಾಂಕ | : | **19-10-2022** |

**ಸಾಕ್ಷಿದಾರರ ವಿನಂತಿಯ ಮೇರೆಗೆ ಮುಖ್ಯ ವಿಚಾರಣೆಯನ್ನು ವಿಡಿಯೊ ಮೂಲಕ ಕರೆಯಿಸಲಾಯಿತು. ಸಾಕ್ಷಿದಾರರಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ಅಡಿಯಲ್ಲಿ ಸಾಕ್ಷಿದಾರರ ವಿಚಾರಣೆ.**

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ನಾನು ಫೆಬ್ರವರಿ 2014 ರಿಂದ ಜನವರಿ 2015 ರವರೆಗೆ ತಿ.ನರಸೀಪುರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 26.06.2014 ರಂದು ಈ ಪ್ರಕರಣದ ಮುಂದುವರಿದ ತನಿಖೆಯನ್ನು ಕಡತ ಸಮೇತವಾಗಿ ಚಾಸಾ-39 ರವರಿಂದ ಪಡೆದು ಅಲ್ಲಿಯವರೆಗೆ ಆಗಿದ್ದ ತನಿಖೆಯನ್ನು ಪರಿಶೀಲನೆ ಮಾಡಿ ನೋಡಿರುತ್ತೇನೆ.

ದಿನಾಂಕ 26.06.2014 ರಂದು ಚಾಸಾ-34 ಇವರಿಂದ ಕೈಬರಹ ಪರೀಕ್ಷಾ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಈ ಹಂತದಲ್ಲಿ ತನಿಖೆ ಪೂರ್ಣಗೊಂಡಿದ್ದರಿಂದ ಮತ್ತು ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷಾಧಾರ ಇರುವುದರಿಂದ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಕಳುಹಿಸಿಕೊಟ್ಟಿರುತ್ತೇನೆ.

ನಾನು ಸ್ವೀಕರಿಸಿದ ಕೈಬರಹ ಪರೀಕ್ಷಾ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ 7 ಎಂದು ಗುರುತಿಸಲಾಯಿತು.

CC No.287/2015
PW.40 (ವಿ.ಎಸ್.ಶಶಿಕುಮಾರ್)

**ಮರುವಿಚಾರಣೆ ಇರುವುದಿಲ್ಲ.**

(ಸಾಕ್ಷಿದಾರರ ಹೇಳಿಕೆಯನ್ನು ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ತಿ. ನರಸೀಪುರ.